# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ59/2017

**ಪಿ.ಡಬ್ಲ್ಯೂಃ5 (ಸಿಡಬ್ಲ್ಯೂಃ 8 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಹರಿಕೃಷ್ಣ** |
| **ತಂದೆಯ ಹೆಸರು** | : | **ತಿಮ್ಮಪ್ಪ** |
| **ವಯಸ್ಸು** | : | **46 ವರ್ಷ** |
| **ಕೆಲಸ** | : | **ಎಇಇ , ಜೆಸ್ಕಾಂ** |
| **ವಾಸ ಸ್ಥಳ** | : | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 19.11.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು 2012 ರಿಂದ 2014 ರ ವರೆಗೆ ನಾನು ಜೆಇಇ ಆಗಿ ಬಳ್ಳಾರಿ ಜೆಸ್ಕಾಂ ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. 19.12.2013 ರಂದು ಬೆಳಿಗ್ಗೆ ಸುಮಾರು 11.30 ಗಂಟೆಗೆ ನನ್ನ ಮೇಲಾಧಿಕಾರಿಯವರ ಆದೇಶದ ಮೇರೆಗೆ ನಾನು ಎಸಿಬಿ ಕಚೇರಿಗೆ ಹೋಗಿರುತ್ತೇನೆ. ಸದರಿ ಕಚೇರಿಯಲ್ಲಿ ಎಸಿಬಿ ಇನ್ಸಪೆಕ್ಟರ್ ಮಹಾಂತೇಶ್ ಮತ್ತು ಚಾಸಾ.7 ಹಸೇನ್ ಬಾಷ ಪಂಚರಾಗಿ ಹಾಜರು ಇದ್ದರು. ಇನ್ಸಪೆಕ್ಟರ್ ರವರು ಬೇರೆ ಊರಿಗೆ ಹೋಗಿ ದಾಳಿ ಮಾಡಬೇಕಾಗಿದೆ , ನಮ್ಮೊಂದಿಗೆ ಬರಬೇಕು ಎಂದು ಹೇಳಿದರು. ಮಧ್ಯಾಹ್ನ 1.00 ಗಂಟೆಗೆ ನಾವೆಲ್ಲರೂ ಸೇರಿಕೊಂಡು ಬಳ್ಳಾರಿಯನ್ನು ಬಿಟ್ಟು , ಆಂದ್ರ ಪ್ರದೇಶದಲ್ಲಿರುವ ಗೆದ್ದಲೂರು ಎಂಬ ನಗರಕ್ಕೆ

ಹೋಗಿದ್ದೇವೆ. ರಾತ್ರಿ 8.00 ಗಂಟೆಗೆ ಗೆದ್ದಲೂರಿಗೆ ತಲುಪಿ ಎಸ್.ಎಸ್. ಪ್ಲಾಸಾ ಎಂಬ ಗೆಸ್ಟ್ ಹೌಸ್ ನಲ್ಲಿ ಉಳಿದುಕೊಂಡೆವು.

**3.** ನಮಗೆ ಸೂಚನೆ ಕೊಟ್ಟ ಮೇರೆಗೆ ನಾವು ಮರು ದಿನ ಬೆಳಿಗ್ಗೆ 5.30 ಗಂಟೆಗೆ ನಾವೆಲ್ಲರೂ ಸೇರಿಕೋಂಡು ಸ್ಥಳೀಯ ಪೊಲೀಸ್ ಠಾಣೆಗೆ ಹೋದೆವು ಮತ್ತು ಅಲ್ಲಿನ ಪೊಲೀಸರಿಗೆ ನಾವು ಬಂದ ವಿಷಯವನ್ನು ತಿಳಿಸಿದೆವು. ಅವರು ನಮ್ಮನ್ನು ಶಾರದ ಟವರ್ಸ ಎನ್ನುವ ಕಟ್ಟಡಕ್ಕೆ ಕರೆದುಕೊಂಡು ಹೋದರು. ಸದರಿ ಕಟ್ಟಡವು 4 ಅಂತಸ್ಥಿನ ಕಟ್ಟಡವಾಗಿದ್ದು ಅಲ್ಲಿ 4 ಜನ ಕೆಲಸಗಾರರು ಇದ್ದು ನಾವು ಮ್ಯಾನೇಜರ್ ನ್ನು ಕರೆಸುವಂತೆ ಹೇಳಿದೆವು. ಅದರಂತೆ ಸಂಕ್ರಾಂತಿ ಸಾಂಭಮೂರ್ತಿ ಎನ್ನುವ ಮ್ಯಾನೇಜರ್ ಬಂದರು. ಅವರಿಗೆ ಮತ್ತು ನಮಗೆ ಇನ್ಸಪೆಕ್ಟರ್ ರವರು ಶೋಧನ ವಾರಂಟ ನ್ನು ತೋರಿಸಿ ನಮ್ಮ ಸಹಿಯನ್ನು ಪಡೆದಿರುತ್ತಾರೆ. ಸದರಿ ಶೋಧನ ವಾರಂಟ ನ್ನು ಗುರುತಿಸುತ್ತೇನೆ. ಅದನ್ನು **ನಿಪಿ.40** ಎಂದು ಸಾಕ್ಷಿಯ ಸಹಿಯನ್ನು **ನಿಪಿ.40 ಎ** ಎಂದು ಗುರುತಿಸಲಾಯಿತು. ಸಾಂಭಮೂರ್ತಿಯವರ ಸಹಿಯನ್ನು ಸಹ ಸದರಿ ವಾರಂಟ್ ನಲ್ಲಿ ಪಡೆದುಕೊಂಡಿರುತ್ತಾರೆ.

**4.** ಸದರಿ ಕಟ್ಟಡವನ್ನು ಶೋಧನೆ ಮಾಡಲಾಗಿ ಮೊದಲ ಮಹಡಿ ಮತ್ತು ಎರಡನೇ ಮಹಡಿಯಲ್ಲಿ ಸಪ್ತಗಿರಿ ಲಾಡ್ಜ್ ಇದ್ದು , 3 ಮತ್ತು 4 ನೇ ಮಹಡಿಯಲ್ಲಿ ಫಂಕ್ಷನ್ ಹಾಲ್ ಇದ್ದವು. ಮೊದಲ ಮಹಡಿಯಲ್ಲಿ 5 ಎಸಿ ರೂಂಗಳು , 2 ನೇ ಮಹಡಿಯಲಿ 1 ಎಸಿ ರೂಂ, 12 ನಾನ್ ಎಸಿ ರೂಂಗಳು ಇದ್ದವು. ಗ್ರೌಂಡ್ ಮಹಡಿಯಲ್ಲಿ ಶಾಪಿಂಗ್ ಕಾಂಪ್ಲೆಕ್ಸ , ಒಂದು ಬ್ಯಾಂಕ್ , ಸೂಪರ್ ಮಾರ್ಕೆಟ್ , ಇ-ಸೇವಾ ಕೇಂದ್ರ , ಕಣ್ಣಿನ ಕ್ಲಿನಿಕ್ ಇದ್ದವು . ಕಟ್ಟಡದಲ್ಲಿರುವ ಎಲ್ಲಾ ಸಾಮಾನುಗಳ ಅಂದಾಜು ಮೌಲ್ಯವನ್ನು ನಿರ್ಧರಿಸಿದೆವು. ಆ ಸಮಯದಲ್ಲಿ ಮ್ಯಾನೇಜರ್ ಸಹ ನಮ್ಮೊಂದಿಗೆ

ಇದ್ದರು. ಸ್ಥಳದಲ್ಲಿ ಬರೆದ ಪಂಚನಾಮೆಯನ್ನು ಗುರುತಿಸುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ. 22 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.22(ಬಿ)** ಎಂದು ಗುರುತಿಸಲಾಯಿತು.

4. ಇನ್ವಾಯ್ಸ ಗಳನ್ನು ಸಹ ಅಮಾನುತ್ತಪಡಿಸಿಕೊಂಡಿದ್ದೇವೆ. 6 ದಾಖಲೆಗಳನ್ನು ಒಟ್ಟಾಗಿ **ನಿಪಿ.41** ಎಂದು ಗುರುತಿಸಲಾಯಿತು. ಪ್ರತಿ ದಾಖಲಗಳ ಮೇಲೆ ನಾನು ಸಹಿ ಮಾಡಿದ್ದೇನೆ. ಬೆಳಿಗ್ಗೆ 7.00 ರಿಂದ ಮಧ್ಯಾಹ್ನ 3.00 ಗಂಟೆ ವರೆಗೆ ಪಂಚನಾಮೆ ಬರೆಯಲಾಗಿದೆ.

**ಪಾಟೀ ಸವಾಲುಃ ಶ್ರೀ ಎಲ್ ಎಸ್ ಕೆಃ ವಕೀಲರು ಆರೋಪಿಯ ಪರಃ**

**5.** ಈ ಪ್ರಕರಣಕ್ಕೆ ಮೊದಲು ನಾನು ಬೇರೆ ಯಾವುದೇ ಪ್ರಕರಣದಲ್ಲಿ ಪಂಚನಾಗಿ ಭಾಗವಹಿಸಿಲ್ಲ. ಪಂಚನಾಗಿ ಭಾಗವಹಿಸಲು ನನಗೆ ಲಿಖಿತ ನೋಟಿಸ್ ಕೊಟ್ಟಿಲ್ಲ. ನನ್ನ ಮೇಲಾಧಿಕಾರಿಗಳು ನನಗೆ ಪಂಚನಾಗಿ ಭಾಗವಹಿಸಲು ಲಿಖಿತ ನೋಟಿಸ್ ನೀಡಿಲ್ಲ. ನಮ್ಮ ಕಚೇರಿಯಲ್ಲಿ ಮುವ್‌ಮೆಂಟ್ ರಿಜಸ್ಟರ್ ಇಲ್ಲ.

6. ಶಾರದಾ ಟವರ್ಸನಲ್ಲಿ ನನಗೆ ಮೊದಲ ಬಾರಿಗೆ ಸರ್ಚ್ ವಾರಂಟ್ ತೋರಿಸಿದ್ದಾರೆ. ಶಾರದಾ ಟವರ್ಸ ಸುಬ್ರಹ್ಮಣ್ಯ ರೆಡ್ಡಿ ( ಆರೋಪಿ ) ರವರ ಮಾಲೀಕತ್ವದಲ್ಲಿದೆ. ನಾವುಗಳು ಬಿಲ್ಡಿಂಗ್ ಪರ್ಮಿಷನ್ ಮತ್ತು ಸ್ಕೆಚ್ ನ್ನು ಪರಿಶೀಲಿಸಿಲ್ಲ. ಅಂದಿನ ಬೆಲೆಯನ್ನು ನಾವು ನಿರ್ಧರಿಸಿ ಪಂಚನಾಮೆಯಲ್ಲಿ ನಮೂದಿಸಿರುತ್ತೇವೆ. ಬಾಡಿಗೆ ಕರಾರು ಪತ್ರವನ್ನು ಅಮಾನತ್ತುಪಡಿಸಿಕೊಂಡಿಲ್ಲ. ಶಾರದಾ ಟವರ್ಸ ಆರೋಪಿಯ ಹೆಂಡತಿಗೆ ಆಕೆಯ ತವರು ಮನೆಯಿಂದು ಉಡುಗೊರೆಯಾಗಿ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ. ಶಾರದಾ ಟವರ್ಸ ಎಷ್ಟು ಹಳೆಯ ಕಟ್ಟಡ ಎಂದು ಪಂಚನಾಮೆಯಲ್ಲಿ ಹೇಳಿದ್ದೇವೊ ಎಂದು ನನಗೆ ನೆನಪಿಲ್ಲ.

**Spl.C.No. 59/2017**
**P.W.5 (C.W.8)**
**Date : 19.11.2024**

ಪಂಚನಾಮೆಯಲ್ಲಿ ಹೇಳಿದ ವಿಷಯಗಳು ನನಗೆ ಗೊತ್ತಿಲ್ಲ ಮತ್ತು ನಾನು ದಾಳಿಯಲ್ಲಿ ಭಾಗವಹಿಸಿಲ್ಲ ಎನ್ನುವುದು ಸರಿಯಲ್ಲ. ಪಂಚನಾಮೆ ಕಾಲಕ್ಕೆ ವೀಡಿಯೋ ಮತ್ತು ಫೋಟೋಗ್ರಾಫಿ ಮಾಡಿಲ್ಲ.

**ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**